Ref.No.79/2021, Further cross of MW–1 on merits, Page No.6

ದಿನಾಂಕಃ 12–02–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– 1 ನೇ ಪಾರ್ಟಿ –Party in person

ಘಟಕದಲ್ಲಿ ನಾನು ಯಾವ ಯಾವ ಶಾಖೆಯಲ್ಲಿ ಕೆಲಸ ಮಾಡಿದ್ದೇನೆಂದು ತೋರಿಸಲು ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನಾನು ಯಾವ ಯಾವ ಶಾಖೆಯಲ್ಲಿ ಕೆಲಸ ಮಾಡಿದ್ದೇನೆಂದು ತೋರಿಸಲು ದಾಖಲಾತಿಯನ್ನು ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಡಿಪೋ ಮ್ಯಾನೇಜರನ್ನು ಕೇಳಬೇಕು ಎನ್ನುತ್ತಾರೆ. ಅಫೆನ್ಸ ಮೆಮೋಗೆ ನಾನು ಕೊಟ್ಟ ಉತ್ತರಕ್ಕೆ ನೀವು ಹಿಂಬರಹ ನೀಡಿಲ್ಲ ಎಂದರೆ ಸಾಕ್ಷಿ ಹಿಂಬರಹ ಕೊಡುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ನಾನು ಸಲ್ಲಿಸಿರುವ ಅರ್ಜಿಗಳಿಗೆ ಯಾವುದೇ ಕ್ರಮ ವಹಿಸಿಲ್ಲ ಎಂದರೆ ಸಾಕ್ಷಿ ಕ್ರಮ ವಹಿಸಿಲ್ಲ ಎಂದು ಹೇಳುತ್ತಾರೆ. ನಿಡಬ್ಲ್ಯೂ–5, 10 ಮತ್ತು 27 ದಾಖಲಾತಿಗಳಲ್ಲಿ ತಾಂತ್ರಿಕ ಮೇಲ್ವಿಚಾರಕರು 2 ನೇ ಪಾಳಿಗೆ ಸಿಬ್ಬಂದಿಯನ್ನು ನೇಮಕ ಮಾಡುವಂತೆ ಬರೆದಿರುತ್ತಾರೆ ಮತ್ತು ಕ್ರಮ ವಹಿಸಿರುವುದಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಘಟಕದ ಉಗ್ರಾಣದ ಸಂಪೂರ್ಣ incharge ನಾನೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಿಡಬ್ಲ್ಯೂ–6 , 8, 22 , 23 , 24, 25 ಮತ್ತು 26 ದಾಖಲಾತಿಗಳಲ್ಲಿ ತಾಂತ್ರಿಕ ಮೇಲ್ವಿಚಾಕರು ನೀಡಿದ ದಾಖಲಾತಿಗಳಿಗೆ ಯಾವುದೇ ಲಿಖಿತ ಹಿಂಬರಹ ನೀಡಿರುವುದಿಲ್ಲ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ನಿಡಬ್ಲ್ಯೂ–14 ದಾಖಲಾತಿಗೆ ನೀವು ಯಾವುದೇ ಕ್ರಮ ವಹಿಸಿಲ್ಲ ಎಂದರೆ ಸಾಕ್ಷಿ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ.

ಈ ಹಂತದಲ್ಲಿ ಸಾಕ್ಷಿ ಕಾಲಾವಕಾಶ ಕೇಳಿದ್ದರಿಂದ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.